ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 15-5-2017

# ಪತ್ರಿಕಾ ಆಮಂತ್ರಣ

**1. ಪತ್ರಿಕಾಗೋಷ್ಠಿ:**

**ಶ್ರೀ ಯಲುವಹಳ್ಳಿ ಎನ್. ರಮೇಶ್,**
**ಅಧ್ಯಕ್ಷರು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,**
**ದಿನಾಂಕ: 16-5-2017 ಮಂಗಳವಾರ ಮಧ್ಯಾಹ್ನ 12-00 ಗಂಟೆಗೆ**
**ಸ್ಥಳ: ಗಾಂಧೀನಗರ, ಸ್ವಾತಂತ್ರ್ಯ ಉದ್ಯಾನವನ, ಜನ ಅಂಗಳ, ಬೆಂಗಳೂರು**

**2.** ಎನ್.ಎಸ್.ಎಸ್. ರಾಜ್ಯ ಪ್ರಶಸ್ತಿ ಪ್ರದಾನ 2015-16 ಮತ್ತು ಯುವಸ್ಪಂದನ ಹಾಗೂ ಜೀವನ ಕೌಶಲ್ಯ-ವರ್ಷದ ಕಾರ್ಯಕ್ರಮಗಳ ಉದ್ಘಾಟನೆ:

ಪ್ರಶಸ್ತಿ ಪ್ರದಾನ – ಉದ್ಘಾಟನೆ ಮತ್ತು ಕೈಪಿಡಿಗಳ ಬಿಡುಗಡೆ:

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:
ಪ್ರಮೋದ್ ಮಧ್ವರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ದಿನಾಂಕ: 16-05-2017, ಮಂಗಳವಾರ, ಸಮಯ : ಸಂಜೆ 4-30 ಗಂಟೆಗೆ

ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಂಗಳೂರು.

**3.** ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಬೆಳಗೆರೆ ಕೃಷ್ಣಶಾಸ್ತ್ರೀ ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭ

ಬೆಳಗೆರೆ ಕೃಷ್ಣಶಾಸ್ತ್ರೀ ಅವರ ಸಮಗ್ರ ಸಾಹಿತ್ಯ-ನೂರರ ನೆನಪು ಕೃತಿ ಲೋಕಾರ್ಪಣೆ:

ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ,

ವಿಶ್ರಾಂತ ಮುಖ್ಯ ನ್ಯಾಯಾಧೀಶರು, ಭಾರತ ಸರ್ವೋಚ್ಛ ನ್ಯಾಯಾಲಯ,

<u>ಅಧ್ಯಕ್ಷತೆ:</u>

ಡಾ. ಮನು ಬಳಿಗಾರ್,
ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು

ದಿನಾಂಕ: 16–05–2017, ಮಂಗಳವಾರ, ಸಮಯ : ಸಂಜೆ 5–30 ಗಂಟೆಗೆ

ಸ್ಥಳ: ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 18

# ಪತ್ರಿಕಾ ಪ್ರಕಟಣೆ

## ಟಿಯೆಸ್ಸಾರ್, ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ ಪ್ರಕಟ

**<u>ಬೆಂಗಳೂರು, ಮೇ 15 ( ಕರ್ನಾಟಕ ವಾರ್ತೆ) :</u>**

ರಾಜ್ಯ ಸರ್ಕಾರವು 2016 ನೇ ಕ್ಯಾಲೆಂಡರ್ ವರ್ಷದ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಹಿರಿಯ ಪತ್ರಕರ್ತ ನಾಗೇಶ್ ಹೆಗಡೆ ಅವರು 2016 ನೇ ಸಾಲಿನ ಟಿಯೇಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿಗೆ ಹಾಗೂ ಕಾರವಾರದ ಕರಾವಳಿ ಮುಂಜಾವು ಪತ್ರಿಕೆಯ ಸಂಪಾದಕ ಶ್ರೀ ಗಂಗಾಧರ ಹಿರೇಗುತ್ತಿ ಅವರನ್ನು ಮೊಹರೆ ಹಣಮಂತರಾಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಟೀಯೆಸ್ಸಾರ್ ಸ್ಮಾರಕ ಪ್ರಶಸ್ತಿಯನ್ನು ಕನ್ನಡ ಪತ್ರಿಕೋದ್ಯಮಕ್ಕೆ ಗಣನೀಯ ಕೊಡುಗೆ ನೀಡಿದ ಪತ್ರಕರ್ತರ ಜೀವಮಾನದ ಸಾಧನೆಯನ್ನು ಗುರುತಿಸಿ ನೀಡಲಾಗುತ್ತದೆ. ಅಂತೆಯೇ ಮೊಹರೆ ಹಣಮಂತರಾಯ ಪ್ರಶಸ್ತಿಯನ್ನು ಒಂದು ಪತ್ರಿಕೆಯನ್ನು ಅಥವಾ ಪತ್ರಿಕಾ ಸಮೂಹವನ್ನು ಕಟ್ಟಿ ಬೆಳೆಸಿದ ಪತ್ರಕರ್ತರಿಗೆ ನೀಡಲಾಗುತ್ತದೆ. ನ್ಯಾಯಮೂರ್ತಿ ಶ್ರೀಮತಿ ಇಂದ್ರಕಲಾ ಅವರ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಈ ಇಬ್ಬರು ಪತ್ರಕರ್ತರ ಹೆಸರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡಿತ್ತು.

ನಾಗೇಶ್ ಹೆಗಡೆ ಅವರ ಸ್ವ ವಿವರ

# ನಾಗೇಶ್ ಹೆಗಡೆ

ನಾಗೇಶ್ ಹೆಗಡೆ ಅವರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಬಕ್ಕೆಮನೆ ಎಂಬ ಚಿಕ್ಕಹಳ್ಳಿಯಲ್ಲಿ 1948 ರಲ್ಲಿ ಜನಿಸಿದರು. ಇವರು ಐಐಟಿಯಲ್ಲಿ ಭೂವಿಜ್ಞಾನದಲ್ಲಿ ಎಂ.ಎಸ್ಸಿ ಪದವಿ ಮತ್ತು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪರಿಸರ ವಿಜ್ಞಾನದಲ್ಲಿ ಎಂ.ಫಿಲ್ ಪದವಿ ಪಡೆದು ನೈನಿತಾಲ್ ವಿಶ್ವವಿದ್ಯಾಲಯದಲ್ಲಿ ಪರಿಸರ ವಿಜ್ಞಾನ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದರು.

ಪತ್ರಕರ್ತ ಮತ್ತು ಲೇಖಕರಾಗಿ ಗಮನ ಸೆಳೆದಿರುವ ನಾಗೇಶ್ ಹೆಗಡೆ ಅವರು ಮೂಲತಃ ವಿಜ್ಞಾನಿ. ಪ್ರಜಾವಾಣಿಗೆ ವಿಜ್ಞಾನ ಮತ್ತು ಅಭಿವೃದ್ಧಿಯ ವರದಿಗಾರರಾಗಿ ಸೇರಿಕೊಂಡ ಏಕೈಕ ಪತ್ರಕರ್ತರಾಗಿದ್ದಾರೆ. ಪ್ರಜಾವಾಣಿಯಲ್ಲಿ 26 ವರ್ಷಗಳ (1980 – 2006) ಕಾಲ ಸೇವೆ ಸಲ್ಲಿಸಿದ್ದಾರೆ. "ವಿಜ್ಞಾನ ವಿಶೇಷ" ಹೆಸರಿನಲ್ಲಿ ಮೂರು ದಶಕಗಳಿಗೂ ಅಧಿಕ ಕಾಲ ವಿಜ್ಞಾನ ಅಂಕಣ ಬರೆದ ಹೆಗ್ಗಳಿಕೆ ಇವರದ್ದು. ಈ ಅಂಕಣ ಈಗಲೂ ಪ್ರತಿ ಗುರುವಾರ ಪ್ರಕಟವಾಗುತ್ತಿದೆ.

ಪರಿಸರ, ವಿಜ್ಞಾನಗಳ ಬಗ್ಗೆ ಅಪಾರ ಜ್ಞಾನ ಹೊಂದಿದ್ದಾರೆ ಹಾಗೂ ಅದನ್ನು ಕನ್ನಡದಲ್ಲಿ ಸರಳವಾಗಿ ಮನಮುಟ್ಟುವಂತೆ ಬರೆಯಬಲ್ಲರು. ನಿವೃತ್ತಿ ನಂತರವೂ ಪರಿಸರ ಮತ್ತು ವಿಜ್ಞಾನಗಳ ಬಗ್ಗೆ ಅರಿವು ಮೂಡಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕನ್ನಡ ಪತ್ರಿಕೋದ್ಯಮದಲ್ಲಿ ವಿಜ್ಞಾನ ಪರಿಸರಕ್ಕೆ ಸಂಬಂಧಿಸಿದಂತೆ ಹೊಸ ಪೀಳಿಗೆಯ ಹಲವಾರು ಪತ್ರಕರ್ತರನ್ನು ಬೆಳೆಸಿ ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಹಲವಾರು ಲೇಖನ ಮಾಲಿಕೆಗಳ ಮೂಲಕ ವಿಜ್ಞಾನ ಮತ್ತು ಪರಿಸರ ಓದುಗರ ಸಮೂಹವನ್ನು ಸೃಷ್ಟಿಸಿದ್ದಾರೆ.

ಪತ್ರಿಕೆಗಳಿಗೆ ಬರೆಯುತ್ತಲೇ ಪುಸ್ತಕಗಳನ್ನೂ ಹೊರತರುವ ನಾಗೇಶ ಹೆಗಡೆ ಅವರು ಇದುವರೆಗೆ 18 ಸ್ವತಂತ್ರ ಕೃತಿಗಳು, ಆರು ಅನುವಾದಿತ ಕೃತಿಗಳು ಹಾಗೂ ಎರಡು ಕೃತಿಗಳನ್ನು ಸಂಪಾದಿಸಿದ್ದಾರೆ. ಇವರ ಅನೇಕ ಲೇಖನಗಳು ಶೈಕ್ಷಣಿಕ ಪಠ್ಯಪುಸ್ತಕಗಳಲ್ಲಿ ಸೇರ್ಪಡೆಯಾಗಿವೆ.

ಇವರ 'ಇರುವುದೊಂದೇ ಭೂಮಿ' ಮತ್ತು 'ಕೆರೆಯಲಿ ಚಿನ್ನ, ಕೆರೆಯೇ ಚಿನ್ನ' ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ, 'ಗಗನಸಖಿಯ ಸೆರಗ ಹಿಡಿದು' ಕೃತಿಗೆ ಆರ್ಯಭಟ ಪ್ರಶಸ್ತಿ, 'ನಮ್ಮೊಳಗಿನ ಬ್ರಹ್ಮಾಂಡ' ಕೃತಿಗೆ ಶಿವರಾಮ ಕಾರಂತ ಪುರಸ್ಕಾರಗಳು ಸಂದಿವೆ. 'ಕ್ಯಾಪ್ಸೂಲಗಿತ್ತಿ', 'ಮಂಗಳನಲ್ಲಿ ಜೀವಲೋಕ', 'ಪ್ರತಿದಿನ ಪರಿಸರ ದಿನ', 'ಮುಷ್ಠಿಯಲ್ಲಿ ಮಿಲೆನಿಯಂ', 'ಗುರುಗ್ರಹದಲ್ಲಿ ದೀಪಾವಳಿ', 'ಅದು ವಿಸ್ಮಯ ಇದು ವಿಷಮಯ', 'ಆಚಿನ ಲೋಕಕ್ಕೆ ಕಾಲಕೋಶ' ಇತ್ಯಾದಿ ಇವರ ಹೆಸರಾಂತ ಕೃತಿಗಳಾಗಿವೆ.

ಕರ್ನಾಟಕ ಸರ್ಕಾರ ನೀಡುವ ಪತ್ರಿಕೋದ್ಯಮದಲ್ಲಿ ಅನೇಕ ಪ್ರಶಸ್ತಿಗಳನ್ನು ಗಳಿಸಿದ ಇವರಿಗೆ ಪ್ರೆಸ್‌ಕ್ಲಬ್ ಪ್ರಶಸ್ತಿ ಮತ್ತು ಮಾಧ್ಯಮ ಅಕಾಡೆಮಿಯ 'ಜೀವಮಾನ ಪ್ರಶಸ್ತಿ' ಹಾಗೂ 2008ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಬೆಂಗಳೂರಿನ ಸಮೀಪದ ಹಳ್ಳಿಯೊಂದರಲ್ಲಿ ಸಣ್ಣ ಕೃಷಿಕರಾಗಿ ನಿವೃತ್ತಿಯ ಜೀವನ ನಡೆಸುತ್ತಿರುವ ಇವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಾಗಿ 'ಮರಿದುಂಬಿ' ಹೆಸರಿನ ಪತ್ರಿಕೆಯನ್ನು ಹೊರ ತರುತ್ತಿದ್ದಾರೆ. ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಗೌರವ ಪ್ರಾಧ್ಯಾಪಕರಾಗಿ ಮತ್ತು ಐಐಜೆಎನ್‌ಎಂ ಪತ್ರಿಕೋದ್ಯಮ ಕಾಲೇಜಿನಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ, ವಿದ್ಯಾರ್ಥಿಗಳಿಗೆ ಉಪನ್ಯಾಸಗಳನ್ನೂ ನೀಡುತ್ತಿದ್ದಾರೆ.

## ನಾಗೇಶ ಹೆಗಡೆ ಅವರ ಸಾಧನೆಯ ಪ್ರಮುಖ ಅಂಶಗಳು:

- ಅವರ ಬರಹಗಳು ಪರಿಸರ ಸಂರಕ್ಷಣೆಯ ಅನೇಕ ಚಳವಳಿಗಳಿಗೆ ಬುನಾದಿ ಒದಗಿಸಿವೆ. ರಾಜ್ಯದ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳ ಪಠ್ಯಗಳಲ್ಲಿ ಅವರ ಬರಹಗಳು ಪಾಠಗಳಾಗಿವೆ.
- ಇಂಗ್ಲೆಂಡ್‌ನಲ್ಲಿ ಕೆಲಕಾಲ ವಾಸವಿದ್ದ ಇವರು ಅಮೆರಿಕ ಸರಕಾರದ ಅತಿಥಿಯಾಗಿ ಆಹ್ವಾನಿತರಾಗಿದ್ದರು. ಬ್ರೆಜಿಲ್, ಕೆನ್ಯಾ, ಮಲೇಶಿಯಾ, ಹಾಂಗ್‌ಕಾಂಗ್ ಮುಂತಾದ ದೇಶಗಳಿಗೆ ಪರಿಸರ ಸಂಬಂಧಿ ಕಾರ್ಯಕ್ರಮಗಳಿಗೆ ಭೇಟಿ ನೀಡಿ ಬಂದಿದ್ದಾರೆ. ಸ್ವಿಟ್ಸರ್‌ಲ್ಯಾಂಡ್‌ನಲ್ಲಿ ರೇಡಿಯೋ ವರದಿಗಾರಿಕೆ ತರಬೇತಿ ಪಡೆದಿದ್ದಾರೆ. ರಿಯೋದಲ್ಲಿ ನಡೆದ ಪೃಥ್ವೀಶೃಂಗ ಸಭೆಗೆ 'ಪ್ರಜಾವಾಣಿ' ಯ ವರದಿಗಾರರಾಗಿ ಹೋಗಿದ್ದರು.
- ಇದುವರೆಗೆ ಅವರು 30 ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಇರುವುದೊಂದೇ ಭೂಮಿ', 'ನಮ್ಮೊಳಗಿನ ಬ್ರಹ್ಮಾಂಡ' "ಮುಷ್ಟಿಯಲ್ಲಿ ಮಿಲೆನಿಯಂ" 'ಗಗನಸಖಿಯ ಸೆರಗ ಹಿಡಿದು', 'ಅಭಿವೃದ್ಧಿಯ ಅಂಧಯುಗ' ಮುಂತಾದವು ಬಹುಚರ್ಚಿತ ಕೃತಿಗಳೆನಿಸಿವೆ.
- ಪತ್ರಿಕೋದ್ಯಮದಲ್ಲಿ ಅನೇಕ ಪ್ರಶಸ್ತಿಗಳನ್ನು ಗಳಿಸಿದ ಇವರಿಗೆ ಪ್ರೆಸ್‌ಕ್ಲಬ್ ಪ್ರಶಸ್ತಿ ಮತ್ತು ಮಾಧ್ಯಮ ಅಕಾಡೆಮಿಯ 'ಜೀವಮಾನ ಪ್ರಶಸ್ತಿ' ಲಭಿಸಿದೆ.
- ಇವರ ಪರಿಸರ, ವಿಜ್ಞಾನ ಮತ್ತು ಮಕ್ಕಳ ಸಾಹಿತ್ಯ ಈ ಮೂರು ಬಗೆಯ ಕೃತಿಗಳಿಗೆ ಮೂರು ಬಾರಿ ಅಕಾಡೆಮಿ ಬಹುಮಾನಗಳು ಬಂದಿವೆ. 'ನಮ್ಮೊಳಗಿನ ಬ್ರಹ್ಮಾಂಡ' ಕ್ಕೆ ಶಿವರಾಮ ಕಾರಂತ ಪ್ರಶಸ್ತಿ ಲಭಿಸಿದೆ. ಇವರು ಸಂಪಾದಿಸಿದ 'ಮಾಧ್ಯಮ ಕರ್ನಾಟಕ' ಗ್ರಂಥಕ್ಕೆ 2014 ರ ವಿಶ್ವೇಶ್ವರಯ್ಯ ಪ್ರಶಸ್ತಿ ಬಂದಿದೆ. 'ನರಮಂಡಲ ಬ್ರಹ್ಮಾಂಡ' ಕೃತಿಗೆ ಈ ವರ್ಷದ ಶ್ರೇಷ್ಠ ವಿಜಾನ ಕೃತಿ ಎಂಬ ಮನ್ನಣೆ ಸಿಕ್ಕಿದೆ. ಈಚೆಗಷ್ಟೇ ಡಾ. ಶಿವರಾಮ ಕಾರಂತರ ನೆನಪಿನ 'ಬಾಲವನ ಪ್ರಶಸ್ತಿ' ಯನ್ನು ಇವರಿಗೆ ನೀಡಲಾಗಿದೆ.
- ಹಂಪಿನ ಕನ್ನಡ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರಾಗಿ ನಿಯುಕ್ತಿಗೊಂಡಿದ್ದ ಇವರು ಐಐಜೆಎನ್‌ಎಂ ಪತ್ರಿಕೋದ್ಯಮ ಕಾಲೇಜಿನ ವಿಸಿಟಿಂಗ್ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ.
- ಕಳೆದ ಎಂಟು ವರ್ಷಗಳಿಂದ ಬೆಂಗಳೂರಿನ ಕೆಂಗೇರಿ ಸಮೀಪದ ಹಳ್ಳಿಯೊಂದರಲ್ಲಿ ಚಿಕ್ಕ ಪ್ರಮಾಣದ ಕೃಷಿಕರಾಗಿ ಪತ್ನಿಯ ಜತೆ ವಾಸವಾಗಿದ್ದಾರೆ.

## ಶ್ರೀ ಗಂಗಾಧರ ಹಿರೇಗುತ್ತಿ ಅವರ ಸ್ವ ವಿವರ

# ಗಂಗಾಧರ ಹಿರೇಗುತ್ತಿ

**ಸಂಪಾದಕರು:**

**ಕರಾವಳಿ ಮುಂಜಾವು**

ರಾಜ್ಯದ ಕರಾವಳಿ ಜಿಲ್ಲೆ ಕಾರವಾರದ ಕರಾವಳಿ ಮುಂಜಾವು ದಿನಪತ್ರಿಕೆಯ ಸಂಸ್ಥಾಪಕ ಮತ್ತು ಸಂಪಾದಕ ಶ್ರೀ ಗಂಗಾಧರ ಹಿರೇಗುತ್ತಿ. ಪದವಿ ಶಿಕ್ಷಣದ ನಂತರ ಊರು ತೊರೆದು ಉದ್ಯೋಗವಿಲ್ಲದೇ ಪತ್ರಿಕೆ ಹಂಚುವುದರ ಮೂಲಕ ಪತ್ರಿಕೋದ್ಯಮ ಲೋಕಕ್ಕೆ ಪಾದಾರ್ಪಣೆ ಮಾಡಿದ ಇವರು ತದನಂತರದಲ್ಲಿ ಪತ್ರಕರ್ತನಾಗಿ ಪತ್ರಿಕೆ ಮಾರಾಟದ ಕಮಿಷನ್ ಅನ್ನು ಸಂಬಳದಂತೆ ಸ್ವೀಕರಿಸಿ, ಪತ್ರಿಕೋದ್ಯಮದ ತಿಳುವಳಿಕೆಯನ್ನು ಅನುಭವದ ಮೂಲಕ ಸಾಕಾರಗೊಳಿಸಿಕೊಂಡವರು.

1982 ರಲ್ಲಿ ಉತ್ತರ ಕನ್ನಡದ 15 ಪೈಸೆ ಮುಖಬೆಲೆಯ ಪ್ರಥಮ ದಿನಪತ್ರಿಕೆ 'ಲೋಕಧ್ವನಿ' ಯ 4 ಪೈಸೆಯ ಕಮಿಷನ್‌ಗಾಗಿ ನೂರಾರು ಪತ್ರಿಕೆಯನ್ನು ತಿಂಗಳಿಗೆ 4 ರೂ ಮಾಸಿಕ ಬಿಡಿ ಬೆಲೆಯಲ್ಲಿ ಮಾರಾಟ ಮಾಡಿ ಆದಾಯಕ್ಕಿಂತಲೂ ಮಿಗಿಲಾಗಿ ಪತ್ರಿಕೋದ್ಯಮದ ಕನಸನ್ನು ಕಂಡವರು. ಕ್ರಮೇಣ ಇದೇ ಅನುಭವದಲ್ಲಿ

1984 ರಲ್ಲಿ ಮಂಗಳೂರಲ್ಲಿ ಆರಂಭವಾದ 'ಮುಂಗಾರು' ದಿನಪತ್ರಿಕೆಗೆ ಉತ್ತರ ಕನ್ನಡದ ವರದಿಗಾರನಾಗಿ ಆಯ್ಕೆಯಾಗಿ 10 ವರ್ಷ ದುಡಿದು, ನಂತರ ಕಾರವಾರದ ಜಿಲ್ಲಾ ಕೇಂದ್ರದಿಂದ ಕರಾವಳಿ ಮುಂಜಾವು ದಿನಪತ್ರಿಕೆಯನ್ನು ಪ್ರಪ್ರಥಮವಾಗಿ ಮೊಳೆಯಚ್ಚಿನ ಯಂತ್ರದಲ್ಲಿ ಆರಂಭಿಸಿದವರು.

ಕೇವಲ 3 ವರ್ಷದಲ್ಲಿ ಶೀಟ್‌ಫೆಡ್ ಅಫ್‌ಸೆಟ್‌ಗೆ ಹೊರಳಿಕೊಂಡು ನಂತರ 2005ರಲ್ಲಿ 8 ಪುಟದ ದಿನಪತ್ರಿಕೆಯನ್ನು ಎರಡು ಕಲರ್ ಪುಟ ಸಹಿತ ಪ್ರಕಟಿಸುವಷ್ಟು ರೋಲ್ ಅಫ್‌ಸೆಟ್ ಯಂತ್ರ ಜೋಡಿಸಿಕೊಳ್ಳುವಷ್ಟು ಸಾಮರ್ಥ್ಯ ಗಳಿಸಿಕೊಂಡವರು. 2011 ರಿಂದ 6 ಪುಟದ ವರ್ಣ ಹಾಗೂ 6 ಪುಟದ ಕಪ್ಪು ಬಿಳುಪಿನಲ್ಲಿ ಹೊರಬರುತ್ತಿರುವ ಕರಾವಳಿ ಮುಂಜಾವು ಸಾಧನೆಯನ್ನು ಆರ್ಥಿಕ, ವಾಣಿಜ್ಯ, ಉದ್ಯಮದ ಹಿನ್ನೆಲೆಯಲ್ಲಿ ಉಳಿದ ಜಿಲ್ಲೆಗಳಿಂದ ಹೊರಬರುತ್ತಿರುವ ಸ್ಥಳೀಯ ದಿನಪತ್ರಿಕೆಗಳಿಗೆ ಹೋಲಿಸಿದರೆ ಯಾವುದೇ ಬೃಹತ್ ಉದ್ಯಮಗಳಿಲ್ಲದ, ಸಣ್ಣ ಕೈಗಾರಿಕೆಯಲ್ಲೂ ಹಿಂದುಳಿದಿರುವ, ಅಡಿಕೆ ಹೊರತಾಗಿ ಯಾವುದೇ ವಾಣಿಜ್ಯ ಬೆಳೆಗಳಿಲ್ಲದ ಉತ್ತರ ಕನ್ನಡದಲ್ಲಿನ ಈ ಪತ್ರಿಕೆಯ ಯಶಸ್ಸು ಅಚ್ಚರಿ ಮೂಡಿಸುವಂತಹದು. ಪತ್ರಿಕೆಯನ್ನು ಸಾರ್ವಜನಿಕ ಧ್ವನಿಯಾಗಿಸಿಕೊಂಡಂತೆ, ಜಿಲ್ಲೆಯ ಪ್ರಾಕೃತಿಕ ವಿಪತ್ತಿನ ಸಂದರ್ಭದಲ್ಲಿ, ದುರ್ಬಲರ ನೆರವಿಗೆ ನಿಂತ ಪತ್ರಿಕೆಯು ತಾಳಿರುವ ಜಾತ್ಯತೀತ ನಿಲುವೂ ಸಹ ಅಷ್ಟೇ ಪ್ರಾಮುಖ್ಯತೆ ಪಡೆದಿದೆ.

ಜಿಲ್ಲಾ ಕೇಂದ್ರ ಸ್ಥಾನವಾದ ಕಾರವಾರ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಗಾಳಿ ಸುಳಿದಾಡುತ್ತಿದ್ದರೆ, ಅದು ಕರಾವಳಿ ಮುಂಜಾವಿನ ಕೊಡುಗೆ ಎಂದು ಇಲ್ಲಿನ ಎಲ್ಲ ಕನ್ನಡ ಸಂಘಟನೆಗಳೂ ಒಪ್ಪಿಕೊಂಡ ಸತ್ಯ. ಜೊತೆಗೆ ಧಾರ್ಮಿಕ ಸಾಮರಸ್ಯದೊಂದಿಗೆ ಭಾಷಾ ಸಾಮರಸ್ಯವನ್ನು ಕಾಪಾಡಿಕೊಂಡ ಹೆಗ್ಗಳಿಕೆ ಈ ಪತ್ರಿಕೆಯದ್ದು. ಹೀಗಾಗಿ ಮುಂಜಾವು ಪತ್ರಿಕೆ ಉತ್ತರ ಕನ್ನಡದ ಮನೆ ಮಾತಾದರೆ, ಗೋವಾ ಕನ್ನಡಿಗರನ್ನು ನಿತ್ಯ ಸಂಪರ್ಕಿಸುವ ಉತ್ತರ ಕನ್ನಡದ ವಾರ್ತಾಪತ್ರ.

ಕಾರವಾರ ನಗರದ ಮಧ್ಯಭಾಗದಲ್ಲಿ **3195** ಚದುರಡಿಯ ಜಾಗದಲ್ಲಿ ಕರಾವಳಿ ಮುಂಜಾವು ಸ್ವಂತ ಕಚೇರಿ ಅತ್ಯುತ್ತಮ ಒಳವಿನ್ಯಾಸ ಹೊಂದಿದೆ.

ನಗರದ ಕೈಗಾರಿಕಾ ವಸಾಹತುವಿನಲ್ಲಿ **10,000** ಚ.ಅ. ಪ್ರದೇಶದಲ್ಲಿ ಆಫ್‌ಸೆಟ್ ಮುದ್ರಣ ಯಂತ್ರವನ್ನು ಹೊಂದಿದ್ದು, ಗಂಟೆಗೆ ಹದಿನೇಳು ಸಾವಿರ ಪ್ರತಿಯನ್ನು ಮುದ್ರಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

## ಸಾಮಾಜಿಕ ಕಾರ್ಯಗಳು:

**ಲೇಖಕರ ಪತ್ರಕರ್ತರ ಕಾರ್ಯಾಗಾರ:** 'ಕರಾವಳಿ ಮುಂಜಾವು' ಪತ್ರಿಕೆಯು ಉತ್ತರ ಕನ್ನಡದ ಲೇಖಕರ ಕಾರ್ಯಾಗಾರ ಎಂದು ಕರೆದವರು ಖ್ಯಾತ ಸಾಹಿತಿ ಜಯಂತ ಕಾಯ್ಕಿಣಿ. ಮುಂಜಾವಿನ ಮೂಲಕ ಲೇಖಕರಾಗಿ ಬೆಳೆದ ಹಲವಾರು ಲೇಖಕರು, ಕವಿಗಳನ್ನು ಹೆಸರಿಸಬಹುದು.

ಕರಾವಳಿ ಮುಂಜಾವಿನಲ್ಲಿ ಮೊದಲ ಅನುಭವ ಪಡೆದು ಆಯ್ಕೆಯಾದ ರಾಜ್ಯದ ಬಹುತೇಕ ಪರ್ತ್ರಕರ್ತರು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. "ಕರಾವಳಿ ಮುಂಜಾವು" ಪತ್ರಿಕೆಯಲ್ಲಿ ಕೆಲಸ ನಿರ್ವಹಿಸಿದ ಅನುಭವವಿದ್ದರೆ ಉಳಿದ ಪತ್ರಿಕೆ ಹಾಗೂ ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಆದ್ಯತೆ ಉಂಟು. ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಕೆಲವು ತಿಂಗಳ ತರಬೇತಿಗೆಂದು ಕರಾವಳಿ ಮುಂಜಾವು ಕಚೇರಿಯನ್ನು ಹಲವು ಬಾರಿ ಆಯ್ಕೆ ಮಾಡಲಾಗಿದೆ.

ಜಿಲ್ಲೆಯ ಹಿಂದುಳಿದ ಹಾಲಕ್ಕಿ ಒಕ್ಕಲು ಸಮಾಜದ ಇಬ್ಬರಿಗೆ ಪತ್ರಿಕೋದ್ಯಮ ಶಿಕ್ಷಣದ ಸ್ನಾತಕೋತ್ತರ ಪದವಿಯವರೆಗೂ ಓದಿಸಿದ ಪತ್ರಿಕೆ. ಈಗಲೂ ಬಡ ದಲಿತರಿಗೆ ಸ್ನಾತಕೋತ್ತರ ಪದವಿಗೆ ಶಿಕ್ಷಣದ ಜವಾಬ್ದಾರಿ ವಹಿಸಿಕೊಂಡಿದೆ.

ಜಿಲ್ಲೆಯ ಯಾವುದೇ ಅವಘಡದಲ್ಲಿ ಹಾನಿಯಾದ ಕುಟುಂಬಕ್ಕೆ ಅಥವಾ ವೈಯಕ್ತಿಕವಾಗಿ ಬದುಕು ಕಳೆದುಕೊಂಡವರಿಗೆ, ಮನೆ ಇಲ್ಲದ ವಿದ್ಯಾರ್ಥಿಗಳಿಗೆ ವೈಯಕ್ತಿಕ ಕೊಡುಗೆಯೊಂದಿಗೆ ಸಹಾಯ ಮಾಡುತ್ತಾ ಬಂದಿದೆ. ಆಸಿಡ್ ದಾಳಿಗೆ ತುತ್ತಾದ ತರುಣಿಗೆ ವೈಯಕ್ತಿಕ ಹಣ ನೀಡಿ ನಂತರ ಪತ್ರಿಕೆಗಳಲ್ಲಿ ಓದುಗರ ಸಹಾಯ ಅಪೇಕ್ಷೆ. ಬರ್ಗಿಯಲ್ಲಿ ಅನಿಲ ಟ್ಯಾಂಕರ್ ಲೀಕ್ ಆಗಿ ರಾತ್ರಿ ವೇಳೆ ಸತ್ತ 11 ಕುಟುಂಬಕ್ಕೆ ಪತ್ರಿಕೆಯಿಂದ ಆರಂಭಿಕ ಹಣ ಹಾಕಿ ನಂತರ ಸಾರ್ವಜನಿಕರಿಂದ ಸುಮಾರು 2 ಲಕ್ಷಕ್ಕೂ ಮಿಕ್ಕಿದ ಹಣ ಸಂಗ್ರಹ.

'ಕರಾವಳಿ ಮುಂಜಾವು' ಎಂದರೆ ಉತ್ತರ ಕನ್ನಡದಲ್ಲಿ ಶುದ್ಧ ಹಸ್ತದ ಪತ್ರಿಕೆಯಾಗಿ ಪ್ರತಿಯೊಬ್ಬರಿಂದ ಪ್ರಶಂಸೆ ಪಡೆದಿದೆ. ಒಂದು ಜಾತ್ಯತೀತ ಪತ್ರಿಕೆಯಾಗಿ, ಹಿಂದುಳಿದ, ಅಲ್ಪಸಂಖ್ಯಾತರ ಧ್ವನಿಯಾಗುವುದರ ಜೊತೆ ಈ ಸಮಾಜದ ದುರ್ಬಲರಿಗೆ ಆರ್ಥಿಕವಾಗಿ ನೆರವಾದ ಪತ್ರಿಕೆ ಇದು.

# ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಇಂದಿನಿಂದಲೇ ಕೌಶಲ್ಯ ಅಭಿಯಾನ ಪ್ರಾರಂಭ- ಮುಖ್ಯಮಂತ್ರಿ

**ಬೆಂಗಳೂರು, ಮೇ 15 ( ಕರ್ನಾಟಕ ವಾರ್ತೆ) :**

ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ 5 ಲಕ್ಷ ಯುವಕ ಯುವತಿಯರಿಗೆ ಕೌಶಲ್ಯ ಅಭಿವೃದ್ಧಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ಇಂದು ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ 'ಕೌಶಲ್ಯ ಕರ್ನಾಟಕ' ನೋಂದಣಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಅನೇಕ ಇಲಾಖೆಗಳಲ್ಲಿ ನೀಡುತ್ತಿದ್ದಾರೆ. ಆದರೆ ಎಲ್ಲಾ ಇಲಾಖೆಯ ಕೆಲಸಗಳಿಗೆ ಸಂಬಂಧಿಸಿದಂತೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಒಂದೇ ಸೂರಿನಡಿ ತಂದು ಉತ್ತಮವಾದ ತರಬೇತಿ ನೀಡಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸ್ಥಾಪಿಸಿದ್ದೇವೆ. 2030ರ ವೇಳೆಗೆ ರಾಜ್ಯದಲ್ಲಿ ಕನಿಷ್ಠ 1.88 ಕೋಟಿ ಯುವಕ-ಯುವತಿಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುವ ಗುರಿ ಇದೆ. ನಿರುದ್ಯೋಗಿ ಯುವಕ-ಯುವತಿಯರಿಗೆ ಗುಣಾತ್ಮಕ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಿ ರಾಜ್ಯ, ಹೊರರಾಜ್ಯ ಮತ್ತು ವಿದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಯತ್ನಿಸಲಾಗುವುದು. 2017-18ನೇ ಸಾಲಿನಲ್ಲಿ 1 ಲಕ್ಷ ಉದ್ಯೋಗ ಸೃಷ್ಟಿಯ ಗುರಿ ಹೊಂದಲಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು

ಈ ನಿಟ್ಟಿನಲ್ಲಿ ನಿರುದ್ಯೋಗಿ ಯುವಕ-ಯುವತಿಯರ ನೋಂದಣಿ ಅಭಿಯಾನ ಆರಂಭಿಸಿದ್ದು, ಬೇಡಿಕೆ ಆಧರಿಸಿ ತರಬೇತಿ ನೀಡಲು ಇದರಿಂದ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಶಕ್ತರಾಗಿ ಮತ್ತು ಸ್ವಾವಲಂಬಿಯಾಗಿ ನಮ್ಮ ಯುವಜನತೆ ಬದುಕಬೇಕು ಆಗ ರಾಜ್ಯದ ಘನತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಾಗುತ್ತದೆ ಎಂದು ಖ್ಯಾತ ಚಲನಚಿತ್ರ ನಟ ಹಾಗೂ ಕೌಶಲ್ಯ ಕರ್ನಾಟಕದ ರಾಜ್ಯ ರಾಯಭಾರಿ ಪುನೀತ್ ರಾಜ್‌ಕುಮಾರ್ ನುಡಿದರು.

ಉದ್ಯೋಗ ಕೌಶಲ್ಯವನ್ನು ಕೊಡುವ ಕಾರ್ಯಕ್ರಮ ಇದಾಗಿದೆ. ವಿವಿಧ ಕ್ಷೇತ್ರದ ವಿಷಯಗಳ ಬಗ್ಗೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ತರಬೇತಿ ನೀಡಲಾಗುವುದು ಎಂದು ವಿಧಾನ ಸಭಾಧ್ಯಕ್ಷ ಕೆ.ಬಿ. ಕೋಳಿವಾಡ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್, ಕೆವಿಟಿಎಸ್‌ಡಿಸಿ ಅಧ್ಯಕ್ಷ ಮುರಳೀಧರ ಹಾಲಪ್ಪ, ವಿಧಾನ ಪರಿಷತ್ ಸದಸ್ಯ ಗೋವಿಂದರಾಜ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಟಿಯಾ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಎಂಎಸ್.ಕೆಎನ್‌ವಿ.ಕೆಎಂ

# ಮುಖ್ಯಮಂತ್ರಿಗಳಿಂದ ಕಾವೇರಿ ಸುವರ್ಣ ಮಹೋತ್ಸವ ಭವನದ ವಾಣಿಜ್ಯ ಸಂಕೀರ್ಣ ಕಟ್ಟಡದ ಶಂಕುಸ್ಥಾಪನೆ

**ಬೆಂಗಳೂರು, ಮೇ 15, (ಕರ್ನಾಟಕ ವಾರ್ತೆ)**

**ಆರು ಕೋಟಿ ರೂ. ವೆಚ್ಚದಲ್ಲಿ 'ಕಾವೇರಿ ಸುವರ್ಣ ಮಹೋತ್ಸವ' ಭವನದ ನೂತನ ವಾಣಿಜ್ಯ ಸಂಕೀರ್ಣ ಕಟ್ಟಡವು ನಿರ್ಮಾಣವಾಗುತ್ತಿದ್ದು, ಇದು ಕರಕುಶಲ ವಸ್ತುಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಹಕಾರಿಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.**

**ಅವರು ಇಂದು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಎಂ.ಜಿ. ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ನೂತನ ವಾಣಿಜ್ಯ ಸಂಕೀರ್ಣ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.**

**1913 ರಲ್ಲಿ ನಾಲ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ಪ್ರಾರಂಭವಾದ ಮೈಸೂರು ಕರಕುಶಲ ನಿಗಮವು, 1964 ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವಾಗಿ ಪರಿವರ್ತನೆಗೊಂಡಿತ್ತು. ಕಲೆ, ಕುಶಲಕರ್ಮಿಗಳ ಏಳ್ಗೆಗಾಗಿ ಶ್ರಮಿಸುತ್ತಿರುವ ನಿಗವವು ಕಲಾತ್ಮಕ ವಸ್ತುಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. 52 ವರ್ಷಗಳ ಇತಿಹಾಸವುಳ್ಳ ನಿಗಮವು ಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡಿ, ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದೆ. ಸರ್ಕಾರ ಸಹ ಕರ್ನಾಟಕ ಕರಕುಶಲ ನಿಗಮಕ್ಕೆ ಪ್ರೋತ್ಸಾಹ ನೀಡುತ್ತದೆ ಎಂದರು.**

ಸಭೆಯಲ್ಲಿ ಮಾತನಾಡಿದ ನಿಗಮದ ಅಧ್ಯಕ್ಷರಾದ ಕಮಲಮ್ಮ ಮಾಗಡಿ ಮಾತನಾಡಿ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಇದೀಗ 52 ವರ್ಷ ಪೂರ್ಣಗೊಳಿಸಿದ್ದು, ಇಲ್ಲಿ ಶ್ರೀಗಂಧ, ಬಿದಿರು, ಆಟಿಕೆ, ಕೆತ್ತನೆ ಪೀಠೋಪಕರಣಗಳು ಇತ್ಯಾದಿ ವಸ್ತುಗಳನ್ನು ಮಾರುಕಟ್ಟೆ ಮಾಡುತ್ತಿದೆ. ರಾಜ್ಯದ ವಿವಿಧೆಡೆ 13 ಕಲಾ ಸಂಕೀರ್ಣಗಳನ್ನು ಸ್ಥಾಪಿಸಿ, ಈ ಮೂಲಕ ಕುಶಲಕರ್ಮಿಗಳಿಂದ ಪ್ರೋತ್ಸಾಹಿಸಿದೆ. ಅಲ್ಲದೆ ಇವರಿಂದ ತಯಾರಾದ ವಸ್ತುಗಳ ನೇರ ಮಾರುಕಟ್ಟೆ ವ್ಯವಸ್ಥೆ ಸಹ ಕಲ್ಪಿಸಿದೆ. ಇವರಿಗೆ ಕಾರ್ಯಾಗಾರ ಹಮ್ಮಿಕೊಂಡಿದೆ. ನಿಗಮವು ಬೆಂಗಳೂರಿನಲ್ಲಿ 3, ಮೈಸೂರಿನಲ್ಲಿ ಎರಡು, ಮಡಿಕೇರಿ, ಮಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ತಲಾ ಒಂದು, ಹೊರರಾಜ್ಯಗಳಾದ ಸಿಕಂದರಾಬಾದ್ ಮತ್ತು ನವದೆಹಲಿಗಳಲ್ಲಿ ಮಾರಾಟ ಮಳಿಗೆಗಳನ್ನು ತೆರೆದಿವೆ. ಗಣ್ಯವಕ್ತಿಗಳು ಬೆಂಗಳೂರಿಗೆ ಭೇಟಿ ನೀಡಿದಾಗ 'ಕಾವೇರಿ ಎಂಪೋರಿಯಂ' ಗೆ ಬರದೆ ಇರುವುದಿಲ್ಲ ಎಂದು ಅವರು ತಿಳಿಸಿದರು.

2016-17 ನೇ ಸಾಲಿನಲ್ಲಿ ನಿಗಮ ಸುಮಾರು 8 ಕೋಟಿ ರೂ. ಗಳ ಲಾಭ ಗಳಿಸಿದೆ. ಅಲ್ಲದೆ ಸುಮಾರು 156 ರಾಜ್ಯ ಪ್ರಶಸ್ತಿಗಳೂ ಬಂದಿದೆ. ನಿಗಮವು ದೇಶದ ವಿದೇಶದ ಪ್ರಮುಖ ನಗರಗಳಲ್ಲಿ ಫ್ರಾಂಚೈಸ್ ಮಳಿಗೆಗಳನ್ನು ತೆರೆಯಲು ಉದ್ದೇಶಿಸಿದೆ. ಆನ್‌ಲೈನ್ ಮಾರಾಟ ಪ್ರಾರಂಭಿಸಿದ್ದು ಇ-ಮಾರ್ಕೆಟಿಂಗ್‌ಗೆ ಪ್ರೋತ್ಸಾಹಿಸಿದೆ. ರಾಜ್ಯದ ಪ್ರಮುಖ ಕಾರ್ಯಕ್ರಮಗಳಲ್ಲಿ ನಿಗಮದ ವಸ್ತುಗಳ ಮಳಿಗೆ ತೆರೆದು ಪ್ರೋತ್ಸಾಹಿಸಬೇಕೆಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವ ಕೆ.ಜೆ. ಜಾರ್ಜ್, ಶಾಂತಿನಗರದ ಶಾಸಕರಾದ ಎನ್.ಎ. ಹ್ಯಾರಿಸ್, ಬಿ.ಬಿ.ಎಂ.ಪಿ. ಸದಸ್ಯ, ಎಂ.ಬಿ. ದ್ವಾರಕಾನಾಥ್, ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ರಾಜವೀರ್ ಪ್ರತಾಪ್ ಶರ್ಮ ಹಾಗೂ ಇತರರು ಉಪಸ್ಥಿತರಿದ್ದರು.

ಎಸ್‌ಎಂ:ಕೆಎನ್‌ಕೆ:ಜಿಪಿಆರ್

## ಸ್ವಯಂ ಸೇವಕರ ಸಂಖ್ಯೆಯನ್ನು ಹತ್ತು ಲಕ್ಷಕ್ಕೆ ಹೆಚ್ಚಿಸುವ ಗುರಿ: ಸಚಿವ ಪ್ರಮೋದ್ ಮಧ್ವರಾಜ್

ಬೆಂಗಳೂರು, ಮೇ 15 ( ಕರ್ನಾಟಕ ವಾರ್ತೆ) :

ಎನ್.ಎಸ್.ಎಸ್. ಸ್ವಯಂ ಸೇವಕರ ಸಂಖ್ಯೆಯನ್ನು ಮುಂದಿನ ವರ್ಷ ಹತ್ತು ಲಕ್ಷಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಪ್ರಮೋದ್ ಮಧ್ವರಾಜ್ ಅವರು ತಿಳಿಸಿದರು.

ಇಂದು ಸಂಜೆ ತಮ್ಮ ಕಛೇರಿಯಲ್ಲಿ ಏರ್ಪಡಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಎನ್‌ಎಸ್‌ಎಸ್ ಪ್ರಶಸ್ತಿ ಪ್ರಕಟಿಸಿ ಮಾತನಾಡಿದ ಸಚಿವರು, ಕಳೆದ ಸಾಲಿನಲ್ಲಿ ಎನ್.ಎಸ್.ಎಸ್. ನ ಕಾರ್ಯಕ್ರಮಗಳಿಗೆ 5.60 ಕೋಟಿ ರೂ. ಅನುದಾನ ನೀಡಿದ್ದು, 2017-18 ನೇ ಸಾಲಿಗೆ 13.65 ಕೋಟಿ ಅನುದಾನವನ್ನು ನೀಡುವ ಮೂಲಕ ಸರ್ಕಾರವು ಅನುದಾನವನ್ನು ದ್ವಿಗುಣಗೊಳಿಸಿದೆ ಎಂದರು.

ಇತರೆ ರಾಜ್ಯಗಳಲ್ಲಿ ಕೇಂದ್ರ ಅನುದಾನದಲ್ಲಿ ಮಾತ್ರ ಈ ಯೋಜನೆ ನಡೆಯುತ್ತಿದ್ದರೆ, ನಮ್ಮ ರಾಜ್ಯದಲ್ಲಿ ವಿಶೇಷ ಚಟುವಟಿಕೆಗಳಿಗೆ ರಾಜ್ಯ ಸರ್ಕಾರ ಅನುದಾನ ನೀಡುತ್ತಿರುವುದರಿಂದ ಕರ್ನಾಟಕ ರಾಷ್ಟ್ರೀಯ ಸೇವಾ ಯೋಜನೆಗೆ ದೇಶದಲ್ಲೇ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಪಿ.ಯು.ಸಿ. ಯಿಂದ ಸ್ನಾತಕೋತ್ತರ ಪದವಿವರೆಗೆ ಮಾತ್ರ ಇದ್ದ ಎನ್.ಎಸ್.ಎಸ್. ಕಾರ್ಯಕ್ರಮವನ್ನು ಈ ವರ್ಷದಿಂದ ಹೈಸ್ಕೂಲಿಗೂ ವಿಸ್ತರಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿದ್ದು, ಇದಕ್ಕಾಗಿ ಇಲಾಖೆಯ ಕ್ರಿಯಾ ಯೋಜನೆಯಲ್ಲಿ 1 ಕೋಟಿ ರೂ. ಮೀಸಲಿಡಲಾಗಿದೆ ಎಂದು ತಿಳಿಸಿದರು.

ಪ್ರತಿ ವರ್ಷ ಅತ್ಯುತ್ತಮ ವಿಶ್ವವಿದ್ಯಾಲಯ ಪ್ರಶಸ್ತಿ ಕರ್ನಾಟಕ್ಕೆ ಲಭಿಸುತ್ತಿದ್ದು, ಈ ವರ್ಷ ರಾಷ್ಟ್ರದ ಅತ್ಯುತ್ತಮ ಎನ್.ಎಸ್.ಎಸ್. ವಿಶ್ವವಿದ್ಯಾಲಯ ಪ್ರಶಸ್ತಿಯು ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಕ್ಕೆ ಲಭಿಸಿರುವುದು ಹೆಮ್ಮೆಯ ವಿಷಯ. 12 ಕಾಲೇಜುಗಳು ಅತ್ಯುತ್ತಮ ಘಟಕ 12 ಯೋಜನಾಧಿಕಾರಿಗಳು ಅತ್ಯುತ್ತಮ ಯೋಜನಾಧಿಕಾರಿ ಪ್ರಶಸ್ತಿ ಪಡೆದಿದ್ದು, 12 ಸ್ವಯಂ ಸೇವಕರು ಉತ್ತಮ ಸ್ವಯಂ ಸೇವಕ/ ಸ್ವಯಂ ಸೇವಕಿಯರು ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ ಎಂಬ ಮಾಹಿತಿ ನೀಡಿದರು.

ಪ್ರಶಸ್ತಿ ಪುರಸ್ಕೃತರಿಗೆ ನಾಳೆ ಸಂಜೆ 4-30 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಕಂಠೀರವದಿಂದ 2 ಕೋಟಿ ಆದಾಯ:

ಈ ಮುಂಚೆ ಕಂಠೀರವ ಕ್ರೀಡಾಂಗಣಕ್ಕೆ 2 ಕೋಟಿ ರೂ. ಖರ್ಚು ಆಗುತ್ತಿದ್ದು, 1 ಕೋಟಿ ಆದಾಯವಾಗುತ್ತಿದ್ದರೆ ತಾವು ಕ್ರೀಡಾ ಸಚಿವರಾದ ನಂತರದಿಂದ ಇದರ ಖರ್ಚು 1 ಕೋಟಿ

ಆದರೆ 2 ಕೋಟಿ ಆದಾಯವಾಗುತ್ತಿದೆ. ಅದೇ ರೀತಿ ಉಡುಪಿಯಲ್ಲಿ ಸರ್ಕಾರೇತರ ಸಂಸ್ಥೆಯಿಂದ 34 ಸಾವಿರ ರೂ.ಗಳಿಗೆ ನಡೆಸಲಾಗುತ್ತಿದ್ದ ಈಜುಕೊಳವನ್ನು ಸರ್ಕಾರವೇ ನಡೆಸುತ್ತಿದ್ದು ಪ್ರತಿ ತಿಂಗಳು 8 ಲಕ್ಷ ಆದಾಯವನ್ನು ಪಡೆಯುವಂತೆ ಮಾಡಲಾಗಿದೆ ಎಂದು ತಿಳಿಸಿದರು. ವಿವಿಧ ಕ್ರೀಡೆಗಳಿಗೆ ಸೇರಿದಂತೆ 200 ತರಬೇತಿದಾರರು ಅವಶ್ಯಕವಾಗಿದ್ದು 100 ತರಬೇತಿದಾರರ ನೇಮಕಕ್ಕಾಗಿ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಪರ್ವತಾರೋಹಣ:

ಕರ್ನಾಟಕ ಇತಿಹಾದಲ್ಲೇ ಪ್ರಪ್ರಥಮ ಬಾರಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಜನರಲ್ ತಿಮ್ಮಯ್ಯ ಸಂಸ್ಥೆಯ ವತಿಯಿಂದ ಪರ್ವತಾರೋಹಣವನ್ನು ಆಯೋಜಿಸಿದ್ದು, ಶ್ರೀಮತಿ ವಸುಮತಿ ಶ್ರೀನಿವಾಸನ್ ಅವರ ನಾಯಕತ್ವದಲ್ಲಿ ಇದೇ ತಿಂಗಳು 17 ರಂದು ಬೆಂಗಳೂರಿನಿಂದ ಹನುಮಾನ್ ತಿಬ್ಬಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಸಚಿವರು ಈ ಪರ್ವತಾರೋಹಣಕ್ಕೆ ಹೊರಟಿರುವ ಎಲ್ಲರಿಗೂ ತಮ್ಮ ಸಾಹಸ ಕ್ರೀಡಾ ಪ್ರೇಮಿಗಳಿಗೆ ಸ್ಫೂರ್ತಿಯಾಗಲೆಂದು ಹಾರೈಸಿದರು.

ಎನ್‌ಎಸ್‌ಎಸ್ ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿ:

<u>ಅತ್ಯುತ್ತಮ ವಿಶ್ವವಿದ್ಯಾಲಯ ಮತ್ತು ಕಾರ್ಯಕ್ರಮ ಸಂಯೋಜನಾಧಿಕಾರಿಗಳು:</u>

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಡಾ: ಕೆ. ಕಾಳಿಚನ್ನೇಗೌಡ, ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಡಾ: ಆರ್. ಶ್ರೀನಿವಾಸ, ಕಾರ್ಯಕ್ರಮ ಸಂಯೋಜನಾಧಿಕಾರಿಗಳು.

<u>ಅತ್ಯುತ್ತಮ ಘಟಕ ಮತ್ತು ಕಾರ್ಯಕ್ರಮ ಅಧಿಕಾರಿಗಳು–ಮಹಿಳೆಯರು:</u>

ಯನೋಪೋಯ ವಿಶ್ವವಿದ್ಯಾಲಯ, ಮಂಗಳೂರು– ಡಾ: ಅಶ್ವಿನಿ ಎಸ್. ಶೆಟ್ಟಿ, ಎಂ.ಎಲ್.ಎ. ಅಕಾಡೆಮಿ ಆಫ್ ಹೈಯರ್ ಲರ್ನಿಂಗ್– ಮಲ್ಲೇಶ್ವರಂ ಬೆಂಗಳೂರು ಶ್ರೀಮತಿ ದಾಕ್ಷಾಯಿಣಿ, ಸರ್ಕಾರಿ ಪದವಿಪೂರ್ವ ಕಾಲೇಜು, ಬ್ರಹ್ಮಾವರ– ಉಡುಪಿ, ಶ್ರೀಮತಿ ಸವಿತಾ ವೈ. , ಕಾಲೇಜ್ ಆಫ್ ಫಾರ್ಮಸಿ– ಕೆ.ಎಲ್.ಎ. ವಿಶ್ವವಿದ್ಯಾನಿಲಯ, ರಾಜಾಜಿನಗರ, ಬೆಂಗಳೂರು –ಡಾ: ಮಮತಾ ಎ. ಡಾ: ಎ.ವಿ. ಬಾಳಿಗ ಕಲಾ ಮತ್ತು ವಿಜ್ಞಾನ ಕಾಲೇಜು, ಕುಮಟ (ಉಕ)– ಡಾ: ರೇವತಿ ಆರ್ ನಾಯಕ್, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಕೊಪ್ಪಳ, ಕೊಪ್ಪಳ ಜಿಲ್ಲೆ– ಶ್ರೀಮತಿ ಲಲಿತಾ ಅಂಗಡಿ,

<u>ಅತ್ಯುತ್ತಮ ಘಟಕ ಮತ್ತು ಕಾರ್ಯಕ್ರಮ ಅಧಿಕಾರಿಗಳು– ಪುರುಷರು</u>

ವಿಶ್ವವಿದ್ಯಾಲಯ ಕಾಲೇಜು, ಹಂಪನಕಟ್ಟೆ, ಮಂಗಳೂರು– ಡಾ: ದಯಾನಂದ ನಾಯಕ್, ಸರ್ಕಾರಿ ಡಿಗ್ರಿ ಕಾಲೇಜು, ಸಿಂಧನೂರು, ರಾಯಚೂರು ಜಿಲ್ಲೆ – ಶ್ರೀ ವೆಂಕಟನಾರಾಯಣ ಮಿರಿಯಮ್, ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ– ಶ್ರೀ ವಿಜಯಕುಮಾರ್ ರಂಗಪ್ಪ ಬಡಿಗೇರ್, ಕೊಂಗಾಡಿಯಪ್ಪ ಕಾಲೇಜು,

ದೊಡ್ಡಬಳ್ಳಾಪುರ- ಶ್ರೀ ಚಂದ್ರಪ್ಪ, ಕೃಷಿ ಕಾಲೇಜು ಜಿ.ಕೆ.ವಿ.ಕೆ. ಬೆಂಗಳೂರು- ಡಾ: ಮುತ್ತುರಾಜು. ಆರ್. ಶ್ರೀ ಶಂಕರ ಕಲಾ ಮತ್ತು ವಾಣಿಜ್ಯ ಕಾಲೇಜು ನವಲಗುಂದ- ಪ್ರೊ. ರಮೇಶ್ ಪಿ. ಚವಾಣ್

ಸ್ವಯಂ ಸೇವಕಿಯರು:

ಕು. ಮೇಘನಾ ಎನ್. ಶ್ರೀ ಕೃಷ್ಣ ಡಿಗ್ರಿ ಕಾಲೇಜು, ಬನಶಂಕರಿ, ಬೆಂಗಳೂರು, ಕು. ಎನ್.ಎಸ್. ಮಾನಸ ಪ್ರಾಂಶುಪಾಲರು, ತೋಟಗಾರಿಕಾ ಕಾಲೇಜು, ಬೀದರ್, ಕು. ಸವಿತಾ.ಕೆ. ಸೆಂಟ್ ಅಗ್ನೀಸ್ ಕಾಲೇಜು. ಮಂಗಳೂರು ಕು. ಟಿ.ಎಂ. ನೀತು ತೋಟಗಾರಿಕಾ ಕಾಲೇಜು, ಮುನಿರಾಬಾದ್, ಕೊಪ್ಪಳ; ಕು. ಭಾನುಪ್ರಿಯ ಆರ್.ಎಂ. ಶ್ರೀ ನಟರಾಜ ರೆಸಿಡೆನ್ಸಿಯಲ್ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮೈಸೂರು,ಲ ಕು. ನೇಹಾ ಎಂ. ಮಾಲಿ ಕಾಲೇಜ್ ಆಫ್ ಫಾರ್ಮಸಿ ಹುಬ್ಬಳ್ಳಿ,

ಸ್ವಯಂ ಸೇವಕರು:

ತೇಜು ಕುಮಾರ್ ಬಿ.ಕೆ. ತೋಟಗಾರಿಕಾ ಕಾಲೇಜು, ಬಾಗಲಕೋಟೆ, ಮನು ಎಸ್.ಎಂ. ಕೃಷಿ ಕಾಲೇಜು ಜಿ.ಕೆ.ವಿ.ಕೆ. ಬೆಂಗಳೂರು ಈಶ್ವರ್ ಸಿ. ರಾಮಗೇರಿ, ಕೃಷಿ ಕಾಲೇಜು ವಿಜಯಪುರ, ಫಣೀಂದ್ರ ಪ್ರಸಾದ್, ಡಿ. ಸುರಾನಾ ಡಿಗ್ರಿ ಕಾಲೇಜು, ಸೌತ್ ಎಂಡ್ ಸರ್ಕಲ್, ಬೆಂಗಳೂರು, ಶಶಾಂಕ್ ಶೆಟ್ಟಿ, ಕೆನರಾ ಕಾಲೇಜು, ಮಂಗಳೂರು, ಮಧು ಸಿಂಗ್ ಜಿ. ಮಹಾರಾಜ ಕಾಲೇಜು, ಮೈಸೂರು,